**ಮಂಧ್ಯಂತರ ಅರ್ಜಿ 6 ರಿಂದ 9 ರ ಮೇಲಿನ ಆದೇಶದಂತೆ ದಿನಾಂಕಃ 20.02.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲು : 2 ನೇ ಪ್ರತಿವಾದಿಯ ಪರ ಶ್ರೀ ಜಿ.ಕೆ.ಜಿ. ವಕೀಲರಿಂದಃ**

1. ಈ ದಾವೆ ಹಾಕುವ ಮುಂಚೆ ನಾನು ಓ.ಎಸ್. ನಂ. 167/2003 ರ ದಾವೆಯ ದೃಢೀಕೃತ ಪ್ರತಿಗಳನ್ನು ಪಡೆದುಕೊಂಡು ಆ ದಾವೆಯನ್ನು ಯಾರು ಸಲ್ಲಿಸಿದ್ದರು ಮತ್ತು ಯಾವ ಆಸ್ತಿ ಬಗ್ಗೆ ಸಲ್ಲಿಸಿದ್ದರು ಎಂದು ತಿಳಿದುಕೊಂಡಿದ್ದೇನೆ ಎಂದರೆ ನನಗೆ ಮಾಹಿತಿ ಇಲ್ಲ. ನಾನು ದಾವಾ ಸ್ವತ್ತನ್ನು ಶಂಕರಪ್ಪನಿಂದ ಖರೀದಿ ಮಾಡುವ ಮುಂಚೆ ಅವರ ಹೆಸರಿಗೆ ಎಂ.ಆರ್. ನಂ. 173/2010-11 ರಂತೆ ಖಾತೆ ಬದಲಾವಣೆಯಾಗಿ ಅವರ ಹೆಸರಿಗೆ ಪಹಣಿ ಇರುವುದನ್ನು ನೋಡಿಯೇ ಖರೀದಿ ಮಾಡಿದ್ದೇನೆ ಎಂದರೆ ಸರಿ. ನಾನು ಬಿ.ಎ ಪದವೀಧರನಿರುತ್ತೇನೆ. ಎಂ.ಆರ್. ನಂ. 173/2010-11 ರ ದಾಖಲೆಯಲ್ಲಿ ಏನೇನು ಮಾಹಿತಿ ಇದೆ ಎಂದು ತಿಳಿದುಕೊಂಡಿದ್ದೇನೆ ಎಂದರೆ ಸರಿ. ಆ ಮ್ಯುಟೇಶನ್ ಆದೇಶದಲ್ಲಿ ಓ.ಎಸ್. ನಂ. 167/2003 ರ ಡಿಕ್ರಿಯಂತೆ ಶಂಕರಪ್ಪನ ಹೆಸರಿಗೆ ಖಾತೆಯಾಗಿದೆ ಎಂದು ನಮೂದಾಗಿದೆ ಎಂದರೆ ಸರಿ. ನಾನು ಸದರಿ ದಾವೆಯ ಡಿಕ್ರಿ ಪ್ರಕಾರ ಇನ್ನೂ ಯಾರು ಯಾರಿಗೆ ಹಕ್ಕು ಇರುತ್ತದೆ ಎಂಬ ಬಗ್ಗೆ ಶಂಕರಪ್ಪನಿಂದ ಆ ದಾವೆಯ ಪ್ರತಿಯನ್ನು ಪಡೆದುಕೊಂಡು ತಿಳಿದುಕೊಳ್ಳಲು ಪ್ರಯತ್ನ ಮಾಡಲಿಲ್ಲವೇ? ಎಂದರೆ ಇಲ್ಲ. ಮ್ಯುಟೇಶನ್ ಆದೇಶದಲ್ಲಿ ದಿನಾಂಕ 25.03.2011 ರ ಒಪ್ಪಿಗೆ ಪತ್ರದ ಪ್ರಕಾರ ಎಂದು ನಮೂದಾಗಿದೆ ಎಂದರೆ ಸರಿ . ನಾನು ಸದರಿ ಒಪ್ಪಿಗೆ ಪತ್ರವನ್ನು ಶಂಕರಪ್ಪನಿಂದ ಪಡೆದುಕೊಂಡು ಓದಿದ್ದೀನಾ? ಎಂದರೆ ಓದಿದ್ದೇನೆ. ಅದು ನೋಂದಾಯಿತ ಒಪ್ಪಿಗೆ ಪತ್ರವೇ ? ಎಂದರೆ ಅಲ್ಲ, ಗ್ರಾಮಸ್ಥರು ಮಾಡಿರುವ ಒಪ್ಪಿಗೆ ಪತ್ರ ಇರುತ್ತದೆ . 2 ನೇ ಪ್ರತಿವಾದಿ ಶಕುಂತಲಮ್ಮ ಆ ಒಪ್ಪಿಗೆ ಪತ್ರದಲ್ಲಿ ಆಕೆಗೆ ಆಸ್ತಿ ಬೇಡವೆಂದು ಬರೆಯಿಸಿ ಸಹಿ ಮಾಡಿದ್ದಾರೆಯೇ ? ಎಂದರೆ ಹೌದು. 2 ನೇ ಪ್ರತಿವಾದಿಯು 1 ನೇ ಪ್ರತಿವಾದಿಗೆ ಯಾವುದೇ ರಿಜಿಸ್ಟರ್ ದಾಖಲೆ ಮೂಲಕ ನನಗೆ ಆಸ್ತಿ ಬೇಡವೆಂದು ಬರವಣಿಗೆ ಮಾಡಿ ಕೊಟ್ಟಿಲ್ಲ ಎಂದರೆ ರಿಜಿಸ್ಟರ್ ಪತ್ರದ ಮೂಲಕ ಮಾಡಿಕೊಟ್ಟಿಲ್ಲ, ಹಾಗೇ ಒಪ್ಪಿಗೆ ಪತ್ರ ಬರೆದುಕೊಟ್ಟಿದ್ದಾರೆ 2 ನೇ ಪ್ರತಿವಾದಿ ತನ್ನ ಮಕ್ಕಳ ಮದುವೆಗಳನ್ನು ತಾನೇ ಸ್ವಂತವಾಗಿ ನೆರವೇರಿಸಿದ್ದಳು ಎಂದರೆ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ. ಈ ದಾವಾ ಸ್ವತ್ತು ಮಾತ್ರವಲ್ಲದೇ ಪ್ರತಿವಾದಿಗಳ ಕುಟುಂಬಕ್ಕೆ ಒಂದು ಮನೆ ಕೂಡಾ ಇರುತ್ತದೆ ಎಂದರೆ ಸರಿ. ಆ ಮನೆಯಲ್ಲಿ 1 ನೇ ಪ್ರತಿವಾದಿ ಅರ್ಧ ಭಾಗದಲ್ಲಿ ಮತ್ತು 2 ನೇ ಪ್ರತಿವಾದಿ ಇನ್ನರ್ಧ ಭಾಗದಲ್ಲಿ ವಾಸ ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಗೆ ಡೋರ್ ನಂ. 17 ಮತ್ತು ಡೋರ್ ನಂ. 24 ಎಂಬ ಇನ್ನೂ ಎರಡು ಮನೆಗಳೂ ಕೂಡಾ ಇರುತ್ತವೆ ಎಂದರೆ ನನಗೆ ಗೊತ್ತಿಲ್ಲ.

2. 2 ನೇ ಪ್ರತಿವಾದಿಯು ಮ್ಯುಟೇಶನ್ ಆದೇಶದ ವಿರುದ್ಧ ಎ.ಸಿ ಯವರ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದಾರೆ ಎಂದರೆ ಸರಿ. ಸದರಿ ಅಪೀಲಿನಲ್ಲಿ ಮಾಡಿದ ಆದೇಶದ ಪ್ರಕಾರ 1 ಮತ್ತು 2 ನೇ ಪ್ರತಿವಾದಿ ಇಬ್ಬರ ಹೆಸರಿನಲ್ಲಿ ಜಂಟಿ ಖಾತೆ ಮಾಡುವಂತೆ ಆದೇಶವಾಗಿದೆ ಎಂದರೆ ಸರಿ. ಆದ್ದರಿಂದ ಇವತ್ತಿನವರೆಗೆ ದಾವಾ ಸ್ವತ್ತಿನ ಖಾತೆ ಇಬ್ಬರು ಪ್ರತಿವಾದಿಗಳ ಹೆಸರಿನಲ್ಲೂ ಜಂಟಿ ಖಾತೆ ಇರುತ್ತದೆ ಎಂದರೆ ಸರಿಯಲ್ಲ. ನಾನು ಮತ್ತು 1 ನೇ ಪ್ರತಿವಾದಿ ನಮ್ಮ ಹೆಸರಿಗೆ ಖಾತೆ ಬದಲಾವಣೆ ಮಾಡುವಂತೆ ಅರ್ಜಿ ಕೊಟ್ಟು ಆ ಬಗ್ಗೆ ವಿವಾದ ಸಂ. 45/2019-20 ದಾಖಲಾಗಿತ್ತು ಎಂದರೆ ಸರಿ. ಅದರಲ್ಲಿ 2 ನೇ ಪ್ರತಿವಾದಿ ಕೂಡಾ ಹಾಜರಾಗಿ ತಕರಾರು ಸಲ್ಲಿಸಿದ್ದರು ಎಂದರೆ ಸರಿ. ನಮ್ಮ ಅರ್ಜಿ ಪ್ರಕಾರ ಸಲ್ಲಿಸಿದ ವಿವಾದ ಸಂ. 45/2019-20 ನ್ನು ಈಗಾಗಲೇ ಎ.ಸಿ ಯವರ ಆದೇಶವಾಗಿರುವ ಕಾರಣ ಅದೇ ಅಂತಿಮವೆಂದು ತೀರ್ಮಾನಿಸಿ ವಜಾ ಮಾಡಲಾಗಿತ್ತು ಎಂದರೆ ವಜಾ ಮಾಡಿಲ್ಲ, ಸಿವಿಲ್ ನ್ಯಾಯಾಲಯಕ್ಕೆ ಹೋಗುವಂತೆ ಆದೇಶ ಮಾಡಿದ್ದಾರೆ. ಕಂದಾಯ ನ್ಯಾಯಾಲಯಗಳ ತೀರ್ಮಾನದ ವಿರುದ್ಧ ನಾನು ಯಾವುದೇ ಅಪೀಲುಗಳನ್ನು ಸಲ್ಲಿಸಿಲ್ಲ ಎಂದರೆ ಸರಿ. ನನ್ನ ಕ್ರಯಪತ್ರದ

ಪ್ರಕಾರ ಪ್ರತಿವಾದಿಗಳಿಗೆ ನೋಟೀಸ್ ನೀಡಿ ಇಲ್ಲಿಯವರೆಗೆ ನನ್ನ ಹೆಸರಿಗೆ ಖಾತೆ ಮಾಡಿಸಿಕೊಂಡಿಲ್ಲ ಎಂದರೆ ಮಾಡಿಸಿಕೊಂಡಿದ್ದೇನೆ. ಓ.ಎಸ್. ನಂ. 35/2020 ರಲ್ಲಿ ಪ್ರತಿವಾದಿಗಳು ಪ್ರತಿವಾದ ಪತ್ರಗಳನ್ನು ಸಲ್ಲಿಸದೇ ಇದ್ದಾಗ ನಾನು ಏಕಪಕ್ಷೀಯ ತೀರ್ಪು ಪಡೆದುಕೊಂಡು ಅದರ ಆಧಾರದ ಮೇಲೆ ಖಾತೆ ಮಾಡಿಸಿಕೊಂಡಿದ್ದೆ ಎಂದರೆ ಸರಿಯಲ್ಲ. ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಏಕಪಕ್ಷೀಯ ಡಿಕ್ರಿ ವಿರುದ್ಧ 2 ನೇ ಪ್ರತಿವಾದಿ ಆರ್.ಎ. ನಂ. 5048/2022 ರಂತೆ ಅಪೀಲು ಸಲ್ಲಿಸಿದ್ದರು ಎಂದರೆ ಸರಿ. ಅಪೀಲಿನಲ್ಲಿ ಏಕಪಕ್ಷೀಯ ಡಿಕ್ರಿಯನ್ನು ವಜಾ ಮಾಡಲಾಗಿತ್ತು ಎಂದರೆ ಸರಿಯಲ್ಲ. ಅಪೀಲಿನ ಆದೇಶದ ಪ್ರಕಾರ ಆ ದಾವೆಯಲ್ಲಿ ಆಕೆಗೆ ಪ್ರತಿವಾದ ಪತ್ರ ಸಲ್ಲಿಸಲು ಅನುಮತಿ ನೀಡಲಾಗಿತ್ತು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯಿಂದ ಪಡೆದುಕೊಂಡಿರುವ ಒಪ್ಪಿಗೆ ಪತ್ರವನ್ನು ಕೋರ್ಟಿಗೆ ಹಾಜರು ಮಾಡಿದ್ದೀರಾ? ಎಂದರೆ ಮಾಡಿಲ್ಲ, ಆದರೆ ನನ್ನ ಬಳಿ ಅದು ಇರುತ್ತದೆ. ಕ್ರಯಪತ್ರ ನೋಂದಣೆ ಮಾಡಿಸಿಕೊಳ್ಳುವಾಗ 2 ನೇ ಪ್ರತಿವಾದಿಗೆ ಕೂಡಾ ಹಕ್ಕು ಇದೆ ಎಂದು ತಿಳಿದು ಬಂದ ನಂತರ, ಆಕೆಯನ್ನೂ ಕರೆಯಿಸಿ ಸಹಿ ಪಡೆಯಲು ಪ್ರಯತ್ನ ಮಾಡಿದ್ದುಂಟೇ? ಎಂದರೆ ಮಾಡಿಲ್ಲ. ಓ.ಎಸ್. ನಂ. 167/2003 ರ ತೀರ್ಪಿನ ಪ್ರಕಾರ ಇಬ್ಬರು ಪ್ರತಿವಾದಿಗಳಿಗೂ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ನಾನು ತೋರಿಸಿದ ದಾವಾ ಸ್ವತ್ತಿನ ಚೆಕ್ಕುಬಂದಿಯ ಉತ್ತರ ದಿಕ್ಕಿನಲ್ಲಿ ನಾನು ಮತ್ತು ದಕ್ಷಿಣ ದಿಕ್ಕಿನಲ್ಲಿ 2 ನೇ ಪ್ರತಿವಾದಿ ಸ್ವಾಧೀನ ಹೊಂದಿದ್ದೇವೆ ಎಂದರೆ ಇಲ್ಲ, ಪೂರ್ತಿಯಾಗಿ ನಾನೇ ಸ್ವಾಧೀನ ಹೊಂದಿದ್ದೇನೆ. ಎರಡೂವರೆ ಎಕರೆಯಲ್ಲಿ 2 ನೇ ಪ್ರತಿವಾದಿ ಈ ವರ್ಷ ಸೂರ್ಯಕಾಂತಿ ಬೆಳೆದಿದ್ದಳು ಎಂದರೆ ಇಲ್ಲ, ಇಡೀ ಜಮೀನಿನಲ್ಲಿ ನಾನೇ ಮೆಕ್ಕೆಜೋಳ ಬೆಳೆದಿದ್ದೆ. ನಾನು 100 ಕ್ವಿಂಟಾಲ್ ಮೆಕ್ಕೆಜೋಳ ಬೆಳೆದಿದ್ದೆ. ಅದನ್ನು ಬೆಳೆದು ಮಾರಾಟ ಮಾಡಿದ ಬಗ್ಗೆ ಬಿಲ್ಲುಗಳನ್ನು ಹಾಜರು ಮಾಡಿದ್ದೀರಾ? ಎಂದರೆ ಲೋಕಲ್ ಆಗಿ ಮಾರಾಟ ಮಾಡುವುದರಿಂದ ಬಿಲ್ ಕೊಡುವುದಿಲ್ಲ. ರೂ. 2 ಸಾವಿರದಂತೆ ಮಾರಾಟ ಮಾಡಿದ್ದೇನೆ. ನನ್ನ ಅಳಿಯ ಓಂಪ್ರಕಾಶ ಈತನಿಗೆ ಮಾರಾಟ ಮಾಡಿದ್ದೇನೆ. ಚೆನ್ನಾಗಿ ಬೆಳೆ ಬಂದರೆ ಎಕರೆಗೆ 15 ಕ್ವಿಂಟಾಲ್‌ನಷ್ಟು ಮಾತ್ರ ಮೆಕ್ಕೆಜೋಳ ಬೆಳೆಯುತ್ತದೆ ಎಂದರೆ ಇಲ್ಲ , 20 ಕ್ವಿಂಟಾಲ್ ಬೆಳೆಯಬಹುದು. ಕ್ರಯಪತ್ರದ ಪ್ರಕಾರ ಇಡೀ ಜಮೀನಿನಲ್ಲಿ ನಾನೇ ಸ್ವಾಧೀನ ಹೊಂದಿರುವ ಬಗ್ಗೆ ಸರ್ವೇ ಮಾಡಿಸಿ ಸರ್ವೇ ವರದಿಯನ್ನು ಹಾಜರು ಮಾಡಿದ್ದೀನಾ? ಎಂದರೆ ಸರ್ವೇ ಮಾಡಿಸಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ದಿನಾಂಕ 30.02.2020 ಮತ್ತು ದಿನಾಂಕ 09.03.2020 ರಂದು 2 ನೇ ಪ್ರತಿವಾದಿ ನನ್ನ ಸ್ವಾಧೀನಕ್ಕೆ ಅಡ್ಡಿಪಡಿಸಿದ್ದಳು ಎಂದು ಸುಳ್ಳು ಬರೆಯಿಸಿದ್ದೇನೆ ಎಂದರೆ ಇಬ್ಬರು ಪ್ರತಿವಾದಿಗಳೂ ನನ್ನ ಸ್ವಾಧೀನಕ್ಕೆ ಯಾವತ್ತೂ ತಕರಾರು ಮಾಡಿಲ್ಲ. ಓ.ಎಸ್, ನಂ. 167/2003 ನ್ನು ಸಲ್ಲಿಸಿ ಡಿಕ್ರಿ ಪಡೆದಾಗಿನಿಂದಲೂ 2 ನೇ ಪ್ರತಿವಾದಿ ತನ್ನ ಅರ್ಧ ಭಾಗದಲ್ಲಿ ಸ್ವಾಧೀನ ಹೊಂದಿರುವ ಕಾರಣ ಆಕೆ ನನ್ನ ಸ್ವಾಧೀನಕ್ಕೆ ಅಡ್ಡಿಪಡಿಸುವ ಪ್ರಶ್ನೆ ಬರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ಪೂರ್ಣ ದಾವಾ ಸ್ವತ್ತನ್ನು ನನ್ನ ಪರವಾಗಿ ಕ್ರಯ ಮಾಡುವ ಪ್ರತ್ಯೇಕ ಹಕ್ಕು ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ ದಾವಾ ಸ್ವತ್ತಿನ ಅರ್ಧ ಭಾಗಕ್ಕೆ 2 ನೇ ಪ್ರತಿವಾದಿಯೇ ಹಕ್ಕುದಾರಳು ಎಂದರೆ ಸರಿಯಲ್ಲ. ಇಬ್ಬರ ಹೆಸರಿನಲ್ಲಿ ಜಂಟಿ ಖಾತೆ ಇರುವ ಕಾರಣ ಇಬ್ಬರು ಪ್ರತಿವಾದಿಗಳಿಗೂ ಸಮಾನವಾದ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ನನ್ನ ಕ್ರಯ ಪತ್ರದ ಪ್ರಕಾರ ದಾವಾ ಸ್ವತ್ತಿನ ಪೂರ್ಣ ಮಾಲೀಕನೆಂದು ಘೋಷಣೆ ಪಡೆಯುವ ಹಕ್ಕು ನನಗೆ ಇಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯಿಂದ 2 ನೇ ಪ್ರತಿವಾದಿ ತನಗೆ ಹಕ್ಕು ಬೇಡವೆಂದು ಬರೆದುಕೊಟ್ಟ ಯಾವುದೇ ದಾಖಲೆಯನ್ನು ನಾನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಒಟ್ಟು ವಿಸ್ತೀರ್ಣದಲ್ಲಿ ನಾನೇ ಸ್ವಾಧೀನ ಹೊಂದಿರುವ ಬಗ್ಗೆ ಯಾವುದೇ ದಾಖಲೆಯನ್ನು ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ಖರೀದಿ ಮಾಡಿದ ನಂತರ ಪ್ರತೀ ವರ್ಷ ಕಂದಾಯ

ಕಟ್ಟಿದ್ದೇನೆ. ಕಂದಾಯ ರಸೀದಿಗಳನ್ನು ಕೋರ್ಟಿಗೆ ಹಾಜರು ಮಾಡಿಲ್ಲ. ನಾನೇ ಸ್ವಾಧೀನ ಇರುವ ಬಗ್ಗೆ ಚೆಕ್ಕುಬಂದಿಯಲ್ಲಿ ಇರುವ ಮಾಲೀಕರ ಪ್ರಮಾಣ ಪತ್ರಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಹೂವಿನ ಹಡಗಲಿ.